ಕರ್ನಾಟಕ ವಿಧಾನಸಭೆ

ಬುಧವಾರ 13ನೇ ಜನವರಿ 1993

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 9.30 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು: (ಶ್ರೀ ಎಸ್.ಎಂ. ಕೃಷ್ಣ) ಅವರು ಪೀಠವನ್ನು ಅಲಂಕರಿಸಿದ್ದರು.

(ಭಾರತೀಯ ಜನತಾಪಕ್ಷದ ಮತ್ತಿತರ ಕೆಲವು ವಿರೋಧ ಪಕ್ಷದ ಸದಸ್ಯರು ಸದನದ ಮಧ್ಯಭಾಗದ ಬಾವಿಯಲ್ಲಿ ಧರಣಿ ಕುಳಿತಿದ್ದರು.)

10.00 a.m.

ಶ್ರೀ ಸಿ. ಬೈರೇಗೌಡ:- ಮಾನ್ಯ ಅಧ್ಯಕ್ಷರೆ, ನಮ್ಮ ಸ್ನೇಹಿತರು ಬಾವಿಯಲ್ಲಿ ಇದ್ದಾರೆ. ಇವರನ್ನು.....

ಅಧ್ಯಕ್ಷರು:- ಯಾರು? ನೀವು ನನ್ನ ಕಣ್ಣಿಗೆ ಬೀಳುತ್ತಾ ಇಲ್ಲ! ಮಾತನಾಡಬೇಕಾದರೆ ಅಧ್ಯಕ್ಷರ ಕಣ್ಣನ್ನು ನೀವು ಸೆಳೆಯಬೇಕಾಗುತ್ತದೆ.

ಪ್ರಕಟಣೆ

ಅಧ್ಯಕ್ಷರು:- ಈ ಕೆಳಕಂಡ ವಿಶ್ವವಿದ್ಯಾನಿಲಯದ ಸೆನೆಟ್‌ಗಳ ಸ್ಥಾನಕ್ಕೆ ಭರ್ತಿ ಮಾಡಬೇಕಾದ ಸ್ಥಾನಗಳ ಸಂಖ್ಯೆಗೆ ಸಮಾನವಾಗಿ ನಾಮಪತ್ರಗಳು ಬಂದಿರುವುದರಿಂದ ಈ ಕೆಳಕಂಡ ಮಾನ್ಯ ಸದಸ್ಯರುಗಳು ಚುನಾಯಿತರಾಗಿರುತ್ತಾರೆಂದು ಘೋಷಿಸಲಾಗಿದೆ.

1. ಗುಲ್ಬರ್ಗಾ ವಿಶ್ವವಿದ್ಯಾನಿಲಯದ ಸೆನೆಟ್

ಶ್ರೀಯುತರುಗಳಾದ:

1. ಕೆ.ವಿ. ರವೀಂದ್ರನಾಥ್ ಬಾಬು
2. ಬಸವರಾಜ್ ಎಚ್. ಪಾಟೀಲ್
3. ಬಾಬುರಾವ್ ಚವಾಣ್
4. ಶರಣಬಸಪ್ಪ ಬಿ. ಮಾಲಿ ಪಾಟೀಲ್
5. ಬಿ. ಹಂಪನಗೌಡ

2. ಕರ್ನಾಟಕ ವಿಶ್ವವಿದ್ಯಾನಿಲಯದ ಸೆನೆಟ್

ಶ್ರೀಯುತರುಗಳಾದ:

1. ಎ.ಎಂ. ಹಿಂಡಸ್‌ಗೇರಿ
2. ಎಸ್.ಎನ್. ಪಾಟೀಲ್
3. ಎಂ.ಬಿ. ಪಾಟೀಲ್
4. ಉಮೇಶ್ ಭಟ್
5. ಶಿವಾನಂದ ಹೆಚ್. ಕೌಜಲಗಿ

3. ಕುವೆಂಪು ವಿಶ್ವವಿದ್ಯಾನಿಲಯದ ಸೆನೆಟ್

ಶ್ರೀಯುತರುಗಳಾದ:

1. ಯು.ಕೆ. ಶಾಮಣ್ಣ
2. ಕೆ. ಶಿವಮೂರ್ತಿ
3. ಎ.ವಿ. ಉಮಾಪತಿ
4. ಡಿ.ಬಿ. ಗಂಗಪ್ಪ
5. ಬಿ.ಎಚ್. ಬನ್ನಿಕೋಡ್

ಶ್ರೀ ಆರ್.ವಿ. ದೇಶಪಾಂಡೆ:– ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಕೆಲವು ದಿವಸಗಳ ಹಿಂದೆ ಒಂದು ಪತ್ರವನ್ನು ಬರೆದಿದ್ದೆ. ಈ ಹುಬ್ಬಳ್ಳಿಯ ಒಂದು ಅಸೋಸಿಯೇಷನ್‌ರವರು ಅವರನ್ನು ಭೇಟ್ಟಿಯಾಗಿ ಒಂದು ಮನವಿಯನ್ನು ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಸಿ. ಬೈರೇಗೌಡ:– ಮಾನ್ಯ ಅಧ್ಯಕ್ಷರೆ, ನಮ್ಮ ಸ್ನೇಹಿತರು ಬಾವಿಯ ಒಳಗಡೆ ಇದ್ದಾರೆ. ಇವರ ಬೇಡಿಕೆಗಳಲ್ಲಿ ಕೆಲಸವನ್ನಾದರೂ ಕೂಡ ಸರ್ಕಾರ ಒಪ್ಪುವಂತಹ ತೀರ್ಮಾನಕ್ಕೆ ಬಂದರೆ ಬಹುಶಃ ನಮ್ಮ ಸ್ನೇಹಿತರು ತಮ್ಮ ಮನಸ್ಸನ್ನು ಬದಲಾಯಿಸಿ ಬಂದು ಕುಳಿತುಕೊಳ್ಳುತ್ತಾರೆ ಎನ್ನುವುದು ನನ್ನ ಭಾವನೆ. ನಾವು ಇಷ್ಟೆಲ್ಲ ಶ್ರಮ ವಹಿಸಿ ಚರ್ಚೆ ಮಾಡಿ ಏನೂ ಸಾಧನೆ ಆಗಲಿಲ್ಲ ಎಂದರೆ ನಮ್ಮ ಮೇಲೆ ಒಂದು ತರಹ ಆರೋಪ ಇರುತ್ತದೆ. ನಾನೂ ಕೂಡ ಇದರಲ್ಲಿ ಭಾಗವಹಿಸಿಬೇಕಾಗಿತ್ತು. ಆದರೆ ಅದು ಎಷ್ಟರಮಟ್ಟಿಗೆ ಸೂಕ್ತ ಎನ್ನುವಂತಹ ಒಂದು ಜಿಜ್ಞಾಸೆ ನನ್ನಲ್ಲಿ ಇದ್ದದ್ದರಿಂದ, ನಾನು ಸ್ನೇಹಿತರ ಜೊತೆ ಭಾಗವಹಿಸಲಿಲ್ಲ. ಅಷ್ಟೇ ವಿನಹ ಅವರು ಎತ್ತಿರತಕ್ಕಂತಹ ವಿಚಾರ ಏನಿದೆ ಅದು ಇಡೀ ರಾಜ್ಯದ ರೈತರ ದೃಷ್ಟಿಯಿಂದ ಇದೆ. ಆದ್ದರಿಂದ ಆದಕ್ಕೆ ಸರ್ಕಾರ ಏನಾದರೂ ಹೇಳಿಕೆಯನ್ನು ಕೊಡಬೇಕು.

ಅಧ್ಯಕ್ಷರು:– ನಿನ್ನೆಯೇ ಹೇಳಿಕೆಯನ್ನು ಕೊಟ್ಟರಲ್ಲ?

ಶ್ರೀ ಸಿ. ಬೈರೇಗೌಡ:– ಅಧ್ಯಕ್ಷರೆ, ನಿನ್ನೆ ತಾವು ಇರಲಿಲ್ಲ. ನಾನು ಇಲ್ಲಿ ಕೊನೆಗಳಿಗೆಯವರೆಗೂ ಕುಳಿತು ಉದಾಹರಣೆಗೆ ಹೇಳುತ್ತಿದ್ದೇನೆ. ಇದನ್ನು ದೊಡ್ಡದು ಮಾಡಬೇಕು ಎಂದು ನನ್ನ ಉದ್ದೇಶ ಅಲ್ಲ. ಕಳೆದ ವರ್ಷ ನಮ್ಮ ಜಿಲ್ಲೆಯಲ್ಲಿ ಆಗಿರತಕ್ಕಂತಹ ಅನಾಹುತಕ್ಕೆ ಇವತ್ತಿನವರೆಗೂ ಏನೂ ಮಾಡಲಿಲ್ಲ. ಇದರ ಬಗ್ಗೆ ಏನು ಹೇಳುತ್ತೀರಿ? ಎಂದು ಕೇಳಿದರೆ ಅದಕ್ಕೂ ಕೂಡ ಉತ್ತರ ಕೊಡಲಿಲ್ಲ. ಕನಿಷ್ಟ ಸೌಜನ್ಯವನ್ನಾದರೂ ಕೂಡ ಸರ್ಕಾರ ತೋರಿಸಬೇಕಾಗಿತ್ತು. ಇದೆಲ್ಲಾ ಉದಾಹರಣೆಯಾಗಿ ಹೇಳುತ್ತಿದ್ದೇನೆ ವಿನಹ ನಾನು ಅದನ್ನು ದೊಡ್ಡದು ಮಾಡಬೇಕು ಎನ್ನುವ ಉದ್ದೇಶದಿಂದ ಅಲ್ಲ. ಇನ್ನೂ ದೊಡ್ಡ ದೊಡ್ಡ ಗಹನವಾದಂತಹ ವಿಚಾರಗಳು ಇವೆ ಅದನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ನಮ್ಮದೂ ಕೂಡಾ ಸಹಮತ ಇದೆ. ಸರ್ಕಾರದವರು ದಯವಿಟ್ಟು ಒಂದು ಹೇಳಿಕೆಯನ್ನಾದರೂ ಕೊಟ್ಟು ಅವರ ಬೇಡಿಕೆಯಲ್ಲಿ ಕೆಲವನ್ನಾದರೂ ಒಪ್ಪಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿಸಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– (ವೆಲ್ ಒಳಗಿಂದ) ನೆರೆಹಾವಳಿ ಬಗ್ಗೆ ಕೇಂದ್ರ ಸರ್ಕಾರದವರು ಕಡೆಗಾಣಿಸಿದ್ದಾರೆ.